ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

K.A.S. ನಿಂದ I.A.S. ಗೆ ಪದೋನ್ನತಿ ಮರುಪರಿಶೀಲಿಸುವ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-

1265 (1544) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಕೇಡರ್‍ನ ನಾಗರಿಕ ಸೇವೆಯಿಂದ (ಕೆ.ಎ.ಎಸ್.) ಭಾರತೀಯ ನಾಗರಿಕ ಸೇವೆ (ಐ.ಎ.ಎಸ್) ಗೆ 2015 ರಲ್ಲಿ ಪದೋನ್ನತಿ ನೀಡಿರುವ ಪಟ್ಟಿಯನ್ನು ಮರು ಪರಿಶೀಲಿಸದೆ ಹೊಸದಾಗಿ ಬಡ್ತಿ ನೀಡಲು ಕೇಂದ್ರ ಲೋಕಸೇವಾ ಆಯೋಗಕ್ಕೆ (ಯು.ಪಿ.ಎಸ್.ಸಿ) ಕಳುಹಿಸಿಕೊಡಲಾಗಿದೆಯೇ ; ಕಳುಹಿಸಿಕೊಟ್ಟಿದಲ್ಲಿ, ಪ್ರಗತಿ ಏನು ;

(ಆ) 2006, 2008, 2010 ನೇ ಸಾಲಿನ ಕೆ.ಎ.ಎಸ್. ಅಧಿಕಾರಿಗಳ ಐ.ಎ.ಎಸ್. ಬಡ್ತಿಗೆ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಯಾವ ಕ್ರಮ ಕೈಗೊಂಡಿದೆ ; 2016 ರಿಂದ 2019 ರ ವರೆಗೆ ಎಷ್ಟು ಅಧಿಕಾರಿಗಳಿಗೆ ಐ.ಎ.ಎಸ್.ಗೆ ಬಡ್ತಿ ನೀಡಲಾಗಿದೆ ;

(ಇ) ಕೇಂದ್ರೀಯ ಆಡಳಿತ ನ್ಯಾಯ ಮಂಡಳಿ (ಸಿ.ಎ.ಟಿ.) ನಿರ್ದೇಶನ ನೀಡಿದಾಗ್ಯೂ ಅರ್ಹ ಅಭ್ಯರ್ಥಿಗಳಿಗೆ ಐ.ಎ.ಎಸ್. ಗೆ ಬಡ್ತಿ ನೀಡಲು ವಿಳಂಬವೇಕೆ ; ಇದು ನ್ಯಾಯಾಂಗ ನಿಂದನೆ ಆಗುವುದಿಲ್ಲವೇ ಹಾಗೂ ಇದಕ್ಕೆ ಸರ್ಕಾರ ತಕ್ಷಣ ಸ್ಪಂಧಿಸುವುದೇ;

(ಈ) 1998-99 ಹಾಗೂ 2014 ನೇ ಸಾಲಿನ ಕೆ.ಎ.ಎಸ್. ಅಧಿಕಾರಿಗಳ ಪೈಕಿ ಎಷ್ಟು ಜನರಿಗೆ ಈ ಹಿಂದೆ ಬಡ್ತಿ ನೀಡಲಾಗಿತ್ತು; ಅದರ ಫಲಿತಾಂಶವೇನು ;

(ಉ) 1998 ನೇ ಸಾಲಿನ ಕೆ.ಎ.ಎಸ್. ಅಕ್ರಮ ನೇಮಕಾತಿ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪಿನಂತೆ ಆಯ್ಕೆ ಪಟ್ಟಿಯನ್ನು ರಾಜ್ಯ ಸರ್ಕಾರವು ಡಿ.ಓ.ಪಿ.ಟಿ.ಗೆ ಸಲ್ಲಿಸಿದೆಯೇ ; ಸಲ್ಲಿಸಿದ್ದರೆ, ಯಾವ ದಿನಾಂಕದಂದು ಸಲ್ಲಿಸಲಾಗಿದೆ ; ಸಲ್ಲಿಸದಿದ್ದರೆ, ಅದಕ್ಕೆ ಕಾರಣಗಳೇನು ;

(ಊ) 1998 ರಿಂದ 2015 ರವರೆಗೆ ಕೆ.ಎ.ಎಸ್. ನಿಂದ ಐ.ಎ.ಎಸ್. ಗೆ ಬಡ್ತಿ ನೀಡಲು ಸರ್ಕಾರ ವಿಳಂಬ ಮಾಡುತ್ತಿರುವುದು ನಿಜವೇ; ನಿಜವಿದ್ದಲ್ಲಿ, ಕಾರಣಗಳೇನು ; ತಕ್ಷಣ ಅರ್ಹರಾದ್ದಂತಹ ಕೆ.ಎ.ಎಸ್. ಅಧಿಕಾರಿಗಳಿಗೆ ಬಡ್ತಿ ನೀಡಲು ಯಾವ ಕಾಲಮಿತಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ?